**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**<u>ಸಹಕಾರ ಸಂಘಗಳ ನಿಬಂಧಕರ ಕಚೇರಿ, ನಂ.1 ಅಲಿ ಆಸ್ಕರ್‌ರಸ್ತೆ, ಬೆಂಗಳೂರು-560052</u>**

ವಿಷಯ : ಉದ್ದೇಶಿತ ಉದ್ದೇಶಿತ ಶ್ರೀ ಸದ್ಗುರು ಸೌಹಾರ್ದ ಸಹಕಾರಿ ನಿಯಮಿತ., ಶಾಂತಾ ಕಾಂಪ್ಲೆಕ್ಸ್, ಕಿನ್ನಿಮುಲ್ಕಿ, ಉಡುಪಿ- 576101 ಇದರ ನೋಂದಣಿ ಪೂರ್ವ ಷೇರು ಸಂಗ್ರಹಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ :
1. ಸಹಕಾರ ಸಂಘಗಳ ಉಪ ನಿಬಂದಕರು, ಉಡುಪಿ ಜಿಲ್ಲೆ, ಇವರ ಸಾಧ್ಯತಾ ವರದಿ ಪತ್ರ ಸಂಖ್ಯೆ: ಡಿಆರ್‌ಪಿ/ಉ/ಸಂಪ/ ನೋಂದಣಿ/ 01/2022-23 ದಿನಾಂಕ: 21-10-2022
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಗಳೂರು ಇವರ ಪತ್ರ ಸಂಖ್ಯೆ: ಸಂಸ/ಸಸನಿಬೆಂ/355/2022-23 ದಿನಾಂಕ:2-11-2022.
3. ಈ ಕಛೇರಿಯ ಆದೇಶ ಸಂಖ್ಯೆ: ಆರ್‌ಎಸ್‌ಆರ್/ ಸೌ.ಕಾ/120/ ಎಕ್ಸ್‌ಎಂಸಿ/2012-13 ದಿನಾಂಕ 04.01.2013.

******

**<u>ಪ್ರಸ್ತಾವನೆ:</u>**

ಉದ್ದೇಶಿತ ಶ್ರೀ ಸದ್ಗುರು ಸೌಹಾರ್ದ ಸಹಕಾರಿ ನಿಯಮಿತ., ಶಾಂತಾ ಕಾಂಪ್ಲೆಕ್ಸ್, ಕಿನ್ನಿಮುಲ್ಕಿ, ಉಡುಪಿ- 576101 ಈ ಸಹಕಾರಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ನೋಂದಣಿ ಮಾಡಲು ನಿರ್ಧರಿಸಿ ದಿನಾಂಕ: 26-9-2022 ರಂದು ಉದ್ದೇಶಿತ ಸಂಘದ ಪ್ರಾರಂಭಿಕ ಸಭೆಯನ್ನು ನಡೆಸಿದ್ದು, ಸಭೆಯಲ್ಲಿ 70 ಜನರು ಹಾಜರಿದ್ದು, ಕರ್ನಾಟಕ ರಾಜ್ಯ ಕಾರ್ಯವ್ಯಾಪ್ತಿಯನ್ನು ಹೊಂದಲು ನಿರ್ಧರಿಸಲಾಗಿದೆ. ಉದ್ದೇಶಿತ ಸಹಕಾರಿಯ ಪ್ರಾರಂಭಿಕ ಷೇರು ರೂ.500/- ನಿಗಧಿಪಡಿಸಿದ್ದು ಅಧಿಕೃತ ಷೇರು ಬಂಡವಾಳ ರೂ.20.00 ಲಕ್ಷ ಎಂದು ನಿಗಧಿಪಡಿಸಿಕೊಂಡಿದೆ. ಉದ್ದೇಶಿತ ಸಂಘವು ಕಾರ್ಯವ್ಯಾಪ್ತಿಯಲ್ಲಿನ ಜನರ ಜೀವನದ ಆರ್ಥಿಕ ಗುಣಮಟ್ಟ ಹೆಚ್ಚಿಸಿಕೊಳ್ಳಲು ಹಾಗೂ ಸ್ವ-ಉದ್ಯೋಗಾವಕಾಶವನ್ನು ಕಲ್ಪಿಸುವ ದೃಷ್ಟಿಯಿಂದ ಹಾಗೂ ಆರ್ಥಿಕವಾಗಿ ಸ್ವಾವಲಂಬನೆ ಮಾಡುವ ಉದ್ದೇಶವಿರಿಸಿಕೊಂಡಿದ್ದು, ಸಹಕಾರಿಯ ಸ್ಥಳ ಪರಿಶೀಲನೆ, ಪ್ರವರ್ತಕರ ಎಲ್ಲಾ ಸಂದರ್ಶನದ ಅಭಿಪ್ರಾಯವನ್ನು ಆಧರಿಸಿ, ಸಂಘದ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ಅನುಮತಿ ನೀಡಬಹುದಾಗಿದೆಂದು ಉಲ್ಲೇಖ(1)ರಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, ಉಡುಪಿ ಜಿಲ್ಲೆ, ಇವರು ಕಾರ್ಯ ಸಾಧ್ಯತಾ ವರದಿಯನ್ನು ಸಲ್ಲಿಸಿರುತ್ತಾರೆ.

ಉದ್ದೇಶಿತ ಸಹಕಾರಿಯ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿದ್ದು ಈ ಕಛೇರಿಯ ಉಲ್ಲೇಖ(3)ರ ಮಾರ್ಗಸೂಚಿಗಳನ್ವಯ ಕನಿಷ್ಟ 1000 ಜನರಿಂದ ರೂ.20.00 ಲಕ್ಷ ಪ್ರಾರಂಭಿಕ ಷೇರು ಹಣವನ್ನು ಕಡ್ಡಾಯವಾಗಿ ಸಂಗ್ರಹಿಸಬೇಕಾಗಿರುತ್ತದೆ. ಈ ಷರತ್ತನ್ನು ವಿಧಿಸಿ, ಪ್ರಾರಂಭಿಕ ಷೇರುಹಣ ಸಂಗ್ರಹಿಸಲು ಸಹಕಾರಿಯ ಮುಖ್ಯಪ್ರವರ್ತಕರಿಗೆ ಷರತ್ತುಬದ್ಧ ಅನುಮತಿ ನೀಡಿ ಈ ಕೆಳಕಂಡ ಆದೇಶ ಹೊರಡಿಸಿದೆ.

**<u>: ಆ ದೇ ಶ :</u>**

**ಸಂಖ್ಯೆ:ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/ನೋಂದಣಿ/124/2022-23 ದಿನಾಂಕ: 8-11-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 4ಕ್ಕೆ ಒಳಪಟ್ಟು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಾವಳಿಗಳು

3 ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕ್ಯಾಪ್ಟನ್ ಡಾ.ಕೆ.ರಾಜೇಂದ್ರ, ಭಾ.ಅ.ಸೇ, ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು. ಆದ ನಾನು ಉದ್ದೇಶಿತ ಶ್ರೀ ಸದ್ಗುರು ಸೌಹಾರ್ದ ಸಹಕಾರಿ ನಿಯಮಿತ., ಶಾಂತಾ ಕಾಂಪ್ಲೆಕ್ಸ್, ಕಿನ್ನಿಮುಲ್ಕಿ, ಉಡುಪಿ- 576101 ಈ ಸಹಕಾರಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿ ನೋಂದಣಿ ಮಾಡುವ ಸಂಬಂಧ ನೋಂದಣಿ ಪೂರ್ವ ಪ್ರಾರಂಭಿಕ ಷೇರುಹಣ ಸಂಗ್ರಹಣೆ ಮಾಡಲು ಸಹಕಾರಿಯ ಮುಖ್ಯಪ್ರವರ್ತಕರಿಗೆ ಈ ಮುಂದಿನ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿರುತ್ತೇನೆ.

**ಷರತ್ತುಗಳು:-**

1. ಉದ್ದೇಶಿತ ಸಹಕಾರಿಯ ಹೆಸರಿನಲ್ಲಿ ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿನ ಕನಿಷ್ಟ 1000 ಜನರಿಂದ ರೂ.20.00(ಇಪ್ಪತ್ತು ಲಕ್ಷ)ಗಳ ಷೇರು ಹಣವನ್ನು ಸಂಗ್ರಹಿಸತಕ್ಕದ್ದು.
2. ಕರ್ನಾಟಕ ಸೌಹಾರ್ದ ಸಹಕಾರಿಕಾಯ್ದೆ ಕಲಂ 20ರಲ್ಲಿ ತಿಳಿಸಿರುವ ರೀತ್ಯಾ ಅರ್ಹತೆಯುಳ್ಳವರಿಂದ ಮಾತ್ರ ಷೇರು ಸಂಗ್ರಹಿಸತಕ್ಕದ್ದು.
3. ಷೇರು ಸಂಗ್ರಹಣೆಗೆ ಅನುಮತಿ ನೀಡಿದ ದಿನಾಂಕದಿಂದ 60 ದಿನಗಳೊಳಗಾಗಿ ಷೇರು ಹಣ ಸಂಗ್ರಹಿಸಿ ಮುಖ್ಯಪ್ರವರ್ತಕರು ಉದ್ದೇಶಿತ ಸಹಕಾರಿಯ ನೋಂದಣಿಗೆ ನಿಗಧಿಪಡಿಸಿದ ದಾಖಲೆಗಳೊಂದಿಗೆ ಪೂರ್ಣ ಪ್ರಸ್ತಾವೆ ಸಲ್ಲಿಸತಕ್ಕದ್ದು.
4. **ಪ್ರತ್ರಿಯೊಬ್ಬ ಸದಸ್ಯರಿಂದ ಸಂಗ್ರಹಿಸಿದ ಷೇರು ಮೊಬಲಗನ್ನು ಆಯಾ ದಿನ ಅಥವಾ ಮರುದಿನ ವ್ಯವಸ್ಥಾಪಕರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಉಡುಪಿ ಮುಖ್ಯ ಶಾಖೆ, ವೀವರ್ಸ್ ಕೋ-ಆಪ್‌ರೇಟಿವ್ ಸೊಸೈಟಿ ಬಿಲ್ಡಿಂಗ್, ಉಡುಪಿ ಜಿಲ್ಲೆ** ಇದರಲ್ಲಿ ಉದ್ದೇಶಿತ ಸಹಕಾರಿಯ ಹೆಸರಿನಲ್ಲಿ ಅಮಾನತ್ತು ಖಾತೆ ತೆರೆದು ಠೇವಣಿ ಮಾಡತಕ್ಕದ್ದು. ಹಾಗೂ ಉದ್ದೇಶಿತ ಸಹಕಾರಿಯ ನೋಂದಣಿ ಸಮಯದಲ್ಲಿ ಷೇರು ಹಣ ಠೇವಣಿ ಮಾಡಿರುವುದಕ್ಕೆ ಬ್ಯಾಂಕಿನಿಂದ ಪಡೆದ ಅಧಿಕೃತ ದಾಖಲೆಗಳೊಂದಿಗೆ(ರಶೀದಿ)ಪ್ರಸ್ತಾವೆ ಸಲ್ಲಿಸತಕ್ಕದ್ದು.
5. ಒಂದೇ ಕುಟುಂಬದ ಸದಸ್ಯರು ಸಹಕಾರಿಯ ಪ್ರವರ್ತಕರಾಗಿರಕೂಡದು.
6. ಕರ್ನಾಟಕ ಸೌಹಾರ್ದ ಸಹಕಾರಿಕಾಯ್ದೆ ಮತ್ತು ನಿಯಮದಡಿಯಲ್ಲಿ ನಿಗದಿಪಡಿಸಿರುವ ನೋಂದಣಿ ಅರ್ಜಿ ನಮೂನೆ-01 ನ್ನು ಸಲ್ಲಿಸತಕ್ಕದ್ದು.
7. ಉದ್ದೇಶಿತ ಸಹಕಾರಿಯ ಕರಡು ಉಪವಿಧಿಗಳ 5 ಪ್ರತಿಗಳನ್ನು ಜಾರಿಯಲ್ಲಿರುವ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ನಿಯಮ 2004ಕ್ಕೆ ಅನುಗುಣವಾಗಿ ಸಿದ್ಧಪಡಿಸಿ ಪ್ರಸ್ತಾವೆ ಸಲ್ಲಿಸಿ, ಅನುಮೋದನೆ ಪಡೆಯತಕ್ಕದ್ದು.
8. ಉದ್ದೇಶಿತ ಸಹಕಾರಿಯ ನೋಂದಣಿ ಸಮಯದಲ್ಲಿ ಪ್ರತಿಯೊಬ್ಬರಿಂದ ಸಂಗ್ರಹಿಸಿದ ಷೇರು ಹಣ ಹಾಗೂ ಸಹಕಾರಿಯ ಸದಸ್ಯರುಗಳ ಹೆಸರು, ವಯಸ್ಸು, ವಿಳಾಸ ಮತ್ತು ಆಧಾರ್ ಸಂಖ್ಯೆ, ಷೇರು ಫೀ ಮತ್ತು ಪ್ರವೇಶ ಶುಲ್ಕ ಹಾಗೂ ಇತರೆ ವಿವರಗಳನ್ನು ಈ ಕೆಳಕಂಡ ನಮೂನೆಯಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಸದರಿ ನಮೂನೆಯಲ್ಲಿ ವಿವರಗಳನ್ನು ಸಲ್ಲಿಸಿದ ನಂತರವೇ ಉದ್ದೇಶಿತ ಸಂಘದ ನೋಂದಣಿಯ ಬಗ್ಗೆ ಕ್ರಮವಿಡಲಾಗುವುದು.

| ಕ್ರ.ಸಂ | ಷೇರುದಾರರ ಹೆಸರು& ವಿಳಾಸ | ವಯಸ್ಸು | ಜನಾಂಗ/ ಜಾತಿ | ಷೇರಿನ ಮೌಲ್ಯ | ಪ್ರತಿ ಷೇರಿನ ಶುಲ್ಕ | ಪ್ರವೇಶ ಶುಲ್ಕ | ಪಡೆದಿರುವ ಒಟ್ಟು ಷೇರು | ಸಂಗ್ರಹಿಸಿರುವ ಒಟ್ಟು ಷೇರಿನ ಮೊತ್ತ | ಷೇರು ಹಣ ಪಾವತಿಸಿದ ದಿನಾಂಕ | ರಸೀದಿ ಪುಸ್ತಕದ ಸಂಖ್ಯೆ& ದಿನಾಂಕ | ಆಧಾರ್ ಸಂ: | ಭಾವ ಚಿತ್ರ | ಸಹಿ |
|---|---|---|---|---|---|---|---|---|---|---|---|---|---|
| | | | | | | | | | | | | | |

9. ಷೇರುದಾರರು ವಿವರವನ್ನು ಈ ಕೆಳಕಂಡ ನಮೂನೆಯಲ್ಲಿ ಸಲ್ಲಿಸುವುದು.

| ಕ್ರ.ಸಂ | ಉದ್ದೇಶಿತ ಸಹಕಾರಿಯ ಹೆಸರು | ಒಟ್ಟು ಸದಸ್ಯರಲ್ಲಿ | | ಒಟ್ಟು ಸದಸ್ಯರಲ್ಲಿ | | | | |
|---|---|---|---|---|---|---|---|---|
| | | ಪುರುಷರು | ಮಹಿಳೆಯರು | ಪ.ಜಾತಿ | ಪ.ಪಂಗಡ | ಅಂಗವಿಕಲರು | ಅಲ್ಪಸಂಖ್ಯಾತರು | ಇತರೆ |
| | | | | | | | | |

10. ನೋಂದಣಿ ಶುಲ್ಕವಾಗಿ ಒಟ್ಟು ಷೇರು ಬಂಡವಾಳದ ಶೇಕಡ ಒಂದರಷ್ಟು ನೋಂದಣಿ ಶುಲ್ಕ (ಕನಿಷ್ಟ ರೂ.500/-,ಗರಿಷ್ಟ ರೂ.5000-00)ವನ್ನು ಸರ್ಕಾರಕ್ಕೆ ಪಾವತಿಸಿ, ಮೂಲ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಸಲ್ಲಿಸತಕ್ಕದ್ದು.
11. ಉಲ್ಲೇಖ(3) ರ ಸೂಚನೆಗಳನ್ನು ಪಾಲಿಸತಕ್ಕದ್ದು.
12. ಕಾನೂನು, ನಿಯಮ, ಈ ಕಛೇರಿಯಿಂದ ನೀಡಲಾಗಿರುವ, ನಿರ್ದೇಶನಗಳನ್ನು ಪಾಲಿಸತಕ್ಕದ್ದು.
13. ನೋಂದಣಿ ವಿಷಯದಲ್ಲಿ ಸಹಕಾರಿಗಳ ನಿಬಂಧಕರು ವಿಧಿಸುವ ಇತರೆ ಯಾವುದೇ ಷರತ್ತುಗಳನ್ನು ಪಾಲಿಸಲು ಬದ್ಧರಾಗಿರತಕ್ಕದ್ದು.
14. ಈಗಾಗಲೇ ಇದೇ ಹೆಸರಿನಲ್ಲಿ ಸಹಕಾರಿಯು ನೋಂದಣಿಯಾಗಿದ್ದಲ್ಲಿ ಪ್ರಸ್ತಾಪಿತ ನಿಮ್ಮ ಸಹಕಾರಿಯನ್ನು ನೋಂದಣಿ ಮಾಡಲಾಗುವುದಿಲ್ಲ.
15. ಸದಸ್ಯನೊಬ್ಬನು ಹೊಂದಬಹುದಾದ ಷೇರು ಮಿತಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ನಿರ್ದೇಶನದಂತೆ ಷೇರು ಬಂಡವಾಳದ 5% ಮಿತಿಯನ್ನು ಮೀರುವಂತಿಲ್ಲ.
16. ರಾಜ್ಯ ಮಟ್ಟದ ಎಲ್ಲಾ ಪ್ರಾಂತ/ಜಿಲ್ಲೆಗಳಿಂದ ಷೇರುದಾರರನ್ನು ಮಾಡಿಕೊಂಡು ಷೇರು ಸಂಗ್ರಹಿಸುವುದು.
17. ಕಡ್ಡಾಯವಾಗಿ ಸದಸ್ಯೇತರ ಇತರೆ ವ್ಯಕ್ತಿಗಳ ಜೊತೆ ವ್ಯವಹಾರ ಮಾಡಲು ಸಹಕಾರಿಯ ಉಪನಿಯಮದಲ್ಲಿ ಅವಕಾಶವಿರಬಾರದು.

(ಕ್ಯಾಪ್ಟನ್. ಡಾ.ಕೆ.ರಾಜೇಂದ್ರ ಭಾ.ಅ.ಸೇ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕರಾಜ್ಯ, ಬೆಂಗಳೂರು.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಗೆ,
ಶ್ರೀ.ಡಾ.ಬಿ.ಎನ್.ಶಾಂತಪ್ರಿಯ
ಮುಖ್ಯ ಪ್ರವರ್ತಕರು,
ಉದ್ದೇಶಿತ ಶ್ರೀ ಸದ್ಗುರು ಸೌಹಾರ್ದ ಸಹಕಾರಿ ನಿಯಮಿತ.,
ಶಾಂತಾ ಕಾಂಪ್ಲೆಕ್ಸ್, ಕಿನ್ನಿಮುಲ್ಕಿ,
ಉಡುಪಿ- 576101